ಪ್ರಕಾರ ಮಾಡಲಾಗಿದೆ. ಈಗ ತಾವು ಏನು ದಾಖಲೆ ಕೊಡುತ್ತೀರಾ ಕೊಡಿ, ಅದರಲ್ಲಿ ದಂಗುಪಯೋಗ, ಅಕ್ರಮಗಳು ಮಾಡಿರತಕ್ಕದ್ದು ಇದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಕೇಸಿನ ಬಗ್ಗೆ ಹೇಳಿದ್ದೀರಿ ಅದು ನನಗೆ ಬರುವುದಿಲ್ಲ, ನಾನು ಗೃಹಸಚಿವರಿಗೆ ಹೇಳುತ್ತೇನೆ. ಎಲ್ಲರೂ ರಾಜಿ ಆಗುವುದು ಇದ್ದರೆ ಕಂಪ್ಲೈಂಟ್ಸನ್ನು ವಾಪಸ್ಸು ತೆಗೆದುಕೊಳ್ಳಲು ಹೇಳಿ.

ಶ್ರೀ ಜಿ. ಬಸವಲಿಂಗಪ್ಪ.—ಸ್ವಾಮಿ, ತಾವು ವಕ್ಫ್ ಕವಿಟಿಗಳನ್ನು ಮಾಡುತ್ತೀರಿ, ಗುಡಿ ಗುಂಡಾರಗಳು ಇರುವ ಕಡೆ ಧರ್ಮದರ್ಶಿಗಳನ್ನು ಮಾಡುತ್ತೀರಿ. ವಕ್ಫ ಕವಿಟಿಗಳಲ್ಲಿ ಒಂದಿಬ್ಬರು ಹಿಂದೂಗಳನ್ನು, ಗುಡಿ ಗುಂಡಾರಗಳ ಧರ್ಮದರ್ಶಿಗಳಲ್ಲಿ ಒಂದಿಬ್ಬರು ಮುಸಾಲ್ಮಾನರುಗಳನ್ನು ಏತಕ್ಕೆ ಹಾಕಬಾರದು. ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ದೇಶದ ಕಾನೂನು ಬದಲಾವಣೆ ಮಾಡಿದರೆ, ನನ್ನ ಅಭ್ಯಂತರವೇನೂ ಇಲ್ಲ.

ಗೋಕಾಕ್ ಗಿರಿಣಿಯ ಅಧಿಸೂಚಿತ ಪ್ರದೇಶ.

೭೦೧. ಶ್ರೀ ಎಂ. ಎಲ್. ಮುತ್ತಣ್ಣ(ಗೋಕಾಕ್) —ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ಮಿಲ್ ನೋಟಿಫೈಡ್ ಏರಿಯಾವನ್ನು ರದ್ದುಗೊಳಿಸುವ ಸಲಹೆ ಸರ್ಕಾರದಲ್ಲಿದೆಯೇ ?

ಆ) ನೋಟಿಫೈಡ್ ಏರಿಯಾ ಕಮಿಟಿಯಿಂದ ಸಾರ್ವಜನಿಕರಿಗೆ ಮಾಡಿದ ಕೆಲಸಗಳಾವುವು ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಅ) ಸಲಹೆಗಳು ಬಂದಿವೆ.

ಆ) ನೋಟಿಫೈಡ್ ಏರಿಯಾ ಕಮಿಟಿಯು ಸಾರ್ವಜನಿಕರಿಗೆ ನೈರ್ಮಲ್ಯ ಸುಧಾರಣೆ ವೀರು ಸರಬರಾಜು, ದೀಪದ ವ್ಯವಸ್ಥೆ ಮುಂತಾದ ಕೆಲಸಗಳನ್ನು ಮಾಡಿದ ಅಲ್ಲದೆ ಕಡಿಮೆ ವೆಚ್ಚದ ಮನೆಯ ಯೋಜನೆಯಡಿಯಲ್ಲಿ ೪೩ ಫಲಾನುಭವಿಗಳಿಗೆ ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಿಸಿ ಕೊಟ್ಟಿದೆ. ದುರ್ಬಲ ವರ್ಗದವರಿಗೆ ನಿವೇಶನ ಹಂಚಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ಸರ್ಕಾರವು ೧೯೮೪–೮೫ನೇ ಸಾಲಿನಲ್ಲಿ ಭೂ ಸ್ವಾಧೀನಕ್ಕಾಗಿ ರೂ. ೧,೬೨,೫೦೦–೦೦ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಮತ್ತು ಭೂ ಸ್ವಾಧೀನಕ್ಕಾಗಿ ಕ್ರಮ ಜರುಗಿಸಲಾಗಿರುತ್ತದೆ.

ಶ್ರೀ ಎಂ. ಎಲ್. ಮುತ್ತಣ್ಣನವರ್.—ಸ್ವಾಮಿ ಈ ಮಿಲ್ಲಿನಲ್ಲಿ ೧೦ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ, ಕಾರ್ಮಿಕ ವರ್ಗದವರಿಗೆ ಈ ಮಿಲ್ಲಿನವರು ಯಾವ ಅನುಕೂಲಗಳನ್ನೂ ಮಾಡಿಲ್ಲ. ೪೩ ಮನೆಗಳನ್ನು ಮಾತ್ರ ಕಟ್ಟಿಸಿದ್ದಾರೆ, ರಸ್ತೆಯಾಗಲೀ, ದೀಪದ ವ್ಯವಸ್ಥೆಯಾಗಲೀ, ಕುಡಿಯುವ ನೀರಿನ ವ್ಯವಸ್ಥೆಯಾಗಲೀ ಇಲ್ಲ. ಆದಷ್ಟು ಬೇಗನೆ ನೋಟಿಫೈಡ್ ಏರಿಯಾವನ್ನು ರದ್ದು ಮಾಡಿ, ಮುಂಡಲಿ ಪಂಚಾಯ್ತಿಗೆ ಒಳಪಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀ ಸಾಗರ್.—ನಾನು ಅದನ್ನು ನೋಡುತ್ತೇನೆ.

ಅಧ್ಯಕ್ಷರು.—ರಾಮಪ್ಪ, ಗೈರುಹಾಜರಿ.

ಕರ್ನಾಟಕ ಪಟ್ಟಣ ಪುರಸಭೆಗಳ ವ್ಯಾಪ್ತಿಯಲ್ಲಿ ಅಗ್ನಿಸಂಸ್ಕಾರ ಘಟಕಗಳ ಬಗ್ಗೆ.

೭೪೮. ಶ್ರೀ ವಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ),—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟು ಜನಸಂಖ್ಯೆ ಇರುವ ಪಟ್ಟಣಗಳ ಹೆಸರುಗಳೇನು